ಅಧ್ಯಕ್ಷರು: ಆಯಿತು ನೀವು ಹೇಳಿರುವ ವಿಚಾರವನ್ನು ಸರ್ಕಾರದವರು ಗಮನಕ್ಕೆ ತಂದುಕೊಳ್ಳುತ್ತಾರೆ, ನಂತರ ಸಂಬಂಧಪಟ್ಟ ಇಲಾಖೆಗೆ ಕಳುಹಿಸಿ ಕೊಡುತ್ತಾರೆ. ಆಮೇಲೆ ಏನು ಕ್ರಮ ತೆಗೆದುಕೊಳ್ಳುತ್ತಾರೆ ನೋಡೋಣ.

(vi) ನಂಜನಗೂಡು ನಂಜುಂಡೇಶ್ವರ ದೇವಸ್ಥಾನದ ಬಳಿ ಬಹಳ ವರ್ಷಗಳಿಂದ ತೆಂಗಿನಕಾಯಿ ವ್ಯಾಪಾರ ಮಾಡುತ್ತಿದ್ದ ಶಿವರಾಜ್ ಎಂಬುವರನ್ನು ಎತ್ತಂಗಡಿ ಮಾಡಿಸಲು ಹೋದಾಗ ಅವರು ಹೃದಯಾಘಾತವಾಗಿ ಮರಣ ಹೊಂದಿರುವುದು.

ಶ್ರೀ ಕೆ.ಬಿ.ಎಸ್. ಮಂಚಾದೇವ ಪ್ರಸಾದ್(ಗುಂಡ್ಲುಪೇಟೆ): ಮಾನ್ಯ ಅಧ್ಯಕ್ಷರೆ, ನಂಜನಗೂಡಿನ ನಂಜುಂಡೇಶ್ವರ ದೇವಸ್ಥಾನದ ಬಳಿಯಲ್ಲಿ ಸುಮಾರು ವರ್ಷಗಳಿಂದ ತೆಂಗಿನಕಾಯಿ ವ್ಯಾಪಾರ ಮಾಡುತ್ತಿದ್ದ ಅಂಗಡಿಯನ್ನು, ಇತ್ತೀಚೆಗೆ ತೆಗೆಸುವ ಪ್ರಯತ್ನ ಮಾಡುವುದಕ್ಕೆ ಹೋದಾಗ ಅಲ್ಲಿ ಒತ್ತಾಯ ಪೂರ್ವಕವಾಗಿ ಎತ್ತಂಗಡಿ ಮಾಡುವ ಸಂದರ್ಭದಲ್ಲಿ, 23ನೇ ತಾರೀಖು ಶಿವರಾಜ್ ಎನ್ನುವವರು ಹೃದಯಾಘಾತವಾಗಿ ಮರಣವನ್ನಪ್ಪಿದ್ದಾರೆ. ಅಂಗಡಿಯನ್ನು ಎತ್ತಂಗಡಿ ಮಾಡುವುದಕ್ಕೆ ಸ್ವಲ್ಪ ಸಮಯ ಕೊಟ್ಟಿದ್ದರೆ ಅವರು ಸಾಯುತ್ತಿರಲಿಲ್ಲ ಬದುಕುತ್ತಿದ್ದರೆಂದು ಸಾರ್ವಜನಿಕರು ಅಭಿಪ್ರಾಯ ವ್ಯಕ್ತ ಮಾಡುತ್ತಿದ್ದಾರೆ. ಮೃತರು ಮೂರು ಮಕ್ಕಳ ತಂದೆಯಾಗಿದ್ದು ಬಹಳ ಕಷ್ಟದಲ್ಲಿದ್ದಾರೆಂದು ಪತ್ರಿಕೆಗಳಲ್ಲಿ ಬಂದಿರುವುದರಿಂದ ಮಾನ್ಯ ಸಚಿವರು ಇದರ ಬಗ್ಗೆ ಗಮನಹರಿಸಿ, ಆ ಕುಟುಂಬಕ್ಕೆ ಬೇರೆ ಏನಾದರೂ ಒಂದು ವ್ಯವಸ್ಥೆ ಮಾಡಿಕೊಡಬೇಕು.

ಶ್ರೀ ಎ.ಆರ್. ಕೃಷ್ಣಮೂರ್ತಿ(ನಂತೇಮಾರಹಳ್ಳಿ): ಮಾನ್ಯ ಅಧ್ಯಕ್ಷರೆ, ನಂಜನಗೂಡಿನ ಶ್ರೀ ಶ್ರೀಕಂಠೇಶ್ವರ ದೇವಸ್ಥಾನದ ಎಕ್ಕಪಕ್ಕದಲ್ಲಿ ಸುಮಾರು 20-30 ವರ್ಷಗಳಿಂದ ಪೂಜಾಸಾಮಗ್ರಿಗಳನ್ನು ದೇವಸ್ಥಾನಕ್ಕೆ ಬರುವ ಭಕ್ತರಿಗೆ ಮಾರುವುದಕ್ಕೆ ಮಳಿಗೆಗಳನ್ನು ಹಾಕಿಕೊಂಡಿದ್ದರು. ಇಂಥ ಸಂದರ್ಭದಲ್ಲಿ ಅಲ್ಲಿನ ಪುರಸಭೆಯವರು ಈ ವ್ಯಾಪಾರಸ್ಥರಿಗೆ ಯಾವುದೇ ಮುನ್ಸೂಚನೆ ಇಲ್ಲದೆ ಏಕಾಏಕಿ ಬೊಲ್ಡೋಜ್ ಮಾಡಿದ್ದರಿಂದ, ಆ ಸಂದರ್ಭದಲ್ಲಿ ಶಿವರಾಜ್ ಎನ್ನುವ ಒಬ್ಬ ವ್ಯಕ್ತಿ ನಮಗೆ ಕಾಲಾವಕಾಶ ಕೊಡಿ, ಯಾವುದೇ ಸೂಚನೆ ತಿಳಿಸದೆ ಈ ರೀತಿ ಮಾಡುವುದು ಸರಿಯಲ್ಲವೆಂದು ಸಂಬಂಧಪಟ್ಟವರನ್ನು ಕೇಳಿಕೊಂಡಿದ್ದಾನೆ.

ಶ್ರೀ ವಿ. ಕೃಷ್ಣಪ್ಪ: ಅವರು ಆಥರೈಸ್ಡ್ ಜಾಗದಲ್ಲಿ ಇದ್ದರೋ ಅಥವಾ ಅನ್‌ಆಥರೈಸ್ಡ್ ಜಾಗದಲ್ಲಿ ಇದ್ದರೋ ?

ಶ್ರೀ ಕೆ.ಆರ್. ಕೃಷ್ಣಮೂರ್ತಿ: ಕಳೆದ 20 ವರ್ಷಗಳಿಂದ ಅಲ್ಲಿಯೇ ಇದ್ದಾರೆ.

ಶ್ರೀ ಎಂ. ದಿವಾಕರ್ ಬಾಬು: ಅವರ ಕಾಲದಲ್ಲಿ ಆಥರೈಸ್ಡ್ ಹಾಗೂ ಸ್ವಂತ ಜಾಗವನ್ನು ನಮ್ಮ ಕ್ಷೇತ್ರದಲ್ಲಿ ಹೊಡೆದಿದ್ದಾರೆ. ಹೀಗಿರುವಾಗ ಅನ್‌ಆಥರೈಸ್ಡ್ ಜಾಗಗಳನ್ನು ಹೊಡೆದರು ಎಂದರೂ ನಾವು ಮಾತನಾಡುತ್ತಾರೆಂದರೆ ನಾವೇನು ಹೇಳುವುದು.

ಶ್ರೀ ಕೆ.ಬಿ.ಎಸ್. ಮಹಾದೇವ ಪ್ರಸಾದ್: ಖಾಲಿ ಮಾಡಿಸಲಿಕ್ಕೆ ವಿರೋಧಿಸುತ್ತಿಲ್ಲ, ಆದರೆ ಆ ಸಂದರ್ಭದಲ್ಲಿ ಒಬ್ಬ ಪ್ರಾಣ ಕಳೆದುಕೊಂಡಿದ್ದಾನೆ ನ್ಯಾಯ ಹೊರಡಿಸಿಕೊಡಿ ಎಂದು ಕೇಳುತ್ತಿದ್ದಾರೆ.

ಶ್ರೀ ಎ.ಆರ್. ಕೃಷ್ಣಮೂರ್ತಿ: ಸ್ಥಳದಲ್ಲಿದ್ದಂಥ ತಹಸೀಲ್ದಾರ್‌ರವರನ್ನು ಈ ವ್ಯಾಪಾರಸ್ಥರು ಈ ವಿಚಾರದಲ್ಲಿ ಕೇಳಿದಾಗ ಅವರು ನಮಗೆ ಯಾವುದೇ ಸ್ಪಷ್ಟ ಲಿಖಿತ ನಿರ್ದೇಶನ ಮೇಲಾಧಿಕಾರಿಗಳಿಂದ ಬಂದಿಲ್ಲ ಎನ್ನುವ ವಿಚಾರವನ್ನು ಅವರ ಮುಂದೆ ವ್ಯಕ್ತಪಡಿಸಿದ್ದಾರೆ. ಇಲ್ಲಿ ಪ್ರಮುಖ ವಿಷಯ ಏನೆಂದರೆ, ಮಾನ್ಯ ಸಹಕಾರ ಸಚಿವರಾಗಲಿ ಅಥವಾ ಗ್ರಾಮೀಣಾಭಿವೃದ್ಧಿ ಸಚಿವರಾಗಲಿ ಈ ಕಡೆ ಸ್ವಲ್ಪ ಗಮನ ಕೊಡಬೇಕು. ಏಕೆಂದರೆ, ಕಳೆದ 10-20 ವರ್ಷಗಳಿಂದ ಒಂದೇ ಸ್ಥಳದಲ್ಲಿ ವ್ಯಾಪಾರ ಮಾಡಿಕೊಂಡು ಬಂದಿರುವವರಿಗೆ ಪುರಸಭೆಯವರು ಯಾವುದೇ ಮುನ್ಸೂಚನೆಯನ್ನು ಕೊಡದೆ ದಿಢೀರನೆ ಬುಲ್ಡೋಜರ್ ಮಾಡುವ ಸಂದರ್ಭದಲ್ಲಿ ಶಿವರಾಜ್ ಎನ್ನುವವರು ಆ ದೃಶ್ಯವನ್ನು ನೋಡಲಿಕ್ಕೆ ಆಗದೆ ಅಲ್ಲಿಯೇ ಹೃದಯಾಘಾತಕ್ಕೊಳಗಾಗಿ ಮರಣವನ್ನಪ್ಪಿರುವುದು ಬೆಳಕಿಗೆ ಬಂದಿದೆ. ಸನ್ಮಾನ್ಯ ರೇಷ್ಮೆ ಸಚಿವರ ಕ್ಷೇತ್ರದಲ್ಲಿ ಈ ಒಂದು ಘಟನೆ ನಡೆದಿದೆ. ಹೃದಯಾಘಾತದಿಂದ ನಿಧನ ಹೊಂದಿರುವ ಶಿವರಾಜ್ ಕುಟುಂಬಕ್ಕೆ ಪರಿಹಾರ ವ್ಯವಸ್ಥೆಯನ್ನು ಕಲ್ಪಿಸಿಕೊಡಬೇಕೆಂದು ಆ ದಿವಸ ಅಲ್ಲಿ ಸಾವಿರಾರು ಜನ ಪ್ರತಿಭಟನೆ ಮಾಡಿದ್ದಾರೆ. ಆದ್ದರಿಂದ ಈ ಒಂದು ವಿಚಾರದ ಬಗ್ಗೆ ಸರ್ಕಾರ ಬಹಳ ಗಂಭೀರವಾಗಿ ಪರಿಗಣಿಸಬೇಕೆಂದು ಕೋರುತ್ತೇನೆ. ಹಾಗೆಯೇ ಇಲ್ಲಿನ ವ್ಯಾಪಾರಸ್ಥರಿಗೆ ಪರ್ಯಾಯ ವ್ಯವಸ್ಥೆಯನ್ನು ಕಲ್ಪಿಸುವವರೆಗೆ ಇಲ್ಲಿಯೇ ಮುಂದುವರಿಯುವಂತೆ ಅವಕಾಶ ಮಾಡಿಕೊಡಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಮಹದೇವ್(ರೇಷ್ಮೆ ಸಚಿವರು): ಮಾನ್ಯ ಅಧ್ಯಕ್ಷರೆ, ಸದರಿ ಜಾಗ ಶ್ರೀಕಂಠೇಶ್ವರ ದೇವಸ್ಥಾನಕ್ಕೆ ಸೇರಿದಂಥ ರೆವಿನ್ಯೂ ಲ್ಯಾಂಡ್ ಆಗಿದೆ. ಚಾಮರಾಜನಗರಕ್ಕೆ ಈ ರಸ್ತೆಯ ಮೂಲಕವೇ ಹೋಗಬೇಕಾಗಿದೆ. ಹಾಗೆಯೇ, ಈ ರಸ್ತೆಯಲ್ಲಿ ಭಕ್ತಾದಿಗಳು ಓಡಾಡುವುದಕ್ಕೆ ಸಹ ತೊಂದರೆಯಾಗುತ್ತಿದೆ. ಈ ಜಾಗದಲ್ಲಿ ತಾತ್ಕಾಲಿಕವಾಗಿ ಶೆಡ್‌ಗಳನ್ನು ಹಾಕಿಕೊಂಡು ವ್ಯಾಪಾರವನ್ನು ಮಾಡಲಾಗುತ್ತಿತ್ತು. ಸುಮಾರು 20 30ವರ್ಷಗಳಿಂದ ಇಲ್ಲಿ ಶೆಡ್‌ಗಳನ್ನು ಹಾಕಿಕೊಂಡಿರಲಿಲ್ಲ. ಏಕೆಂದರೆ, ನಾನು ಇಲ್ಲಿಯೆ ಹುಟ್ಟಿ ಬೆಳೆದವನು. ಮಾನ್ಯ ಸದಸ್ಯರುಗಳು ನನ್ನ ಕ್ಷೇತ್ರದ ಜನರ ಬಗ್ಗೆ ಎಷ್ಟು ಸಹಾನುಭೂತಿಯನ್ನು ಇಟ್ಟು ಕೊಂಡಿದ್ದಾರೆಯೋ ಅದಕ್ಕಿಂತ ನೂರರಷ್ಟು ಸಹಾನುಭೂತಿಯನ್ನು ನಾನು ಇಟ್ಟು ಕೊಂಡಿದ್ದೇನೆ. ಹಾಗೆಯೇ ಬಡವರ ಬಗ್ಗೆ ಹೆಚ್ಚು ಕಾಳಜಿಯನ್ನು ನಾನು ಹೊಂದಿದ್ದೇನೆ. ನಾಲ್ಕನೇ ತಾರೀಖು ಶ್ರೀಕಂಠೇಶ್ವರ ದೇವಸ್ಥಾನದ ರಥೋತ್ಸವ ನಡೆಯುತ್ತಿದ್ದು, ಈ ಸಂದರ್ಭದಲ್ಲಿ ಈ ಜಾಗದಲ್ಲಿ ಭಕ್ತಾದಿಗಳು ಹೋಗಿ ಬರುವುದಕ್ಕೆ ತೊಂದರೆಯಾಗಬಾರದೆಂಬ ದೃಷ್ಟಿಯಿಂದ ಜಿಲ್ಲಾಧಿಕಾರಿಗಳು ಒಂದು ಸಭೆ ಮಾಡಿ ಅಂಗಡಿಗಳನ್ನು ತೆರವು ಮಾಡಿಸುವುದಕ್ಕೆ ನಿರ್ಣಯವನ್ನು ಮಾಡಿದ್ದಾರೆ. ದೇವಸ್ಥಾನಕ್ಕೆ ಸೇರಿದಂಥ ಸುಮಾರು 16 ಎಕರೆ ಜಾಗದಲ್ಲಿ ಒಂದು ದೊಡ್ಡ ಅತಿಥಿಗೃಹ ಮತ್ತು ಯಾತ್ರಾರ್ಥಿಗಳ ಸೌಕರ್ಯಕ್ಕೋಸ್ಕರ ಸೌಲಭ್ಯಗಳನ್ನು ಮತ್ತು ಶೌಚಾಲಯ ವ್ಯವಸ್ಥೆ ಹಾಗೂ ರಥ ನಿಲ್ಲಿಸುವುದಕ್ಕೋಸ್ಕರ ಸುವ್ಯವಸ್ಥಿತವಾದ ಜಾಗವನ್ನು ನಿರ್ಮಾಣ ಮಾಡುವುದಕ್ಕಾಗಿ ಒಟ್ಟು 10 ಕೋಟಿ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ಒಂದು ಯೋಜನೆಯನ್ನು ಹಾಕಿಕೊಂಡು ಸನ್ಮಾನ್ಯ ಮುಖ್ಯಮಂತ್ರಿಯವರಿಗೆ ಈ ವಿಷಯಕ್ಕೆ ಸಂಬಂಧಪಟ್ಟಂತೆ ಮನವಿಯನ್ನು ಸಹ ಕೊಡಲಾಗಿತ್ತು. ಈಗ ಸದರಿ ಕೆಲಸಗಳು ಪ್ರಾರಂಭವಾಗಿವೆ. ಈ 16 ಎಕರೆ ಜಮೀನಿಗೆ ಸಂಬಂಧಪಟ್ಟಂಥ ರಸ್ತೆಯ ಪಕ್ಕದಲ್ಲಿ ಇವರು ತಾತ್ಕಾಲಿಕವಾಗಿ ಅಂಗಡಿಗಳನ್ನು ಹಾಕಿಕೊಂಡಿದ್ದರು. ಜಿಲ್ಲಾಧಿಕಾರಿಯವರು ಈ ವಿಷಯದ ಬಗ್ಗೆ ಸಭೆ ಮಾಡಿ ಸದರಿ ಅಂಗಡಿಗಳನ್ನು ತೆರವು ಮಾಡಲಿಕ್ಕೆ ತೀರ್ಮಾನವನ್ನು ತೆಗೆದುಕೊಂಡಿದ್ದರು.

ಗುಂಡ್ಲುಪೇಟೆಯಲ್ಲಿ ಕೆಲವು ಅಂಗಡಿಗಳನ್ನು ಐದಾರು ಲಾರಿ ಮತ್ತು ಬುಲ್ಡೋಜರ್ ತೆಗೆದು ತೆರವು ಮಾಡಿಸಿರುವುದರಿಂದ ಅಲ್ಲಿ ಬಹಳ ಚೆನ್ನಾಗಿ ಇದೆ ಎಂದು ಮಾನ್ಯ ಮಹದೇವ್ ಪ್ರಸಾದ್‌ರವರೆ ಹೇಳಿದ್ದರು. ಹಾಗೆಯೇ ಇಲ್ಲಿ ನೀವು ಮಾಡಿರುವಂಥ ಕೆಲಸವೂ ಕೂಡ ಬಹಳ ಚೆನ್ನಾಗಿ ಇದೆ ಎಂದು ಅವರೇ ಹೇಳಿದ್ದಾರೆ. ಆದರೆ ಇಲ್ಲಿ ಏಕೋ ಈ ರೀತಿ ಮಾತನಾಡುತ್ತಿದ್ದಾರೆ. ಇದು ನನಗೇನು ಅರ್ಥವಾಗುತ್ತಿಲ್ಲ.

ಶ್ರೀ ಎಚ್.ಎಸ್. ಮಹದೇವ ಪ್ರಸಾದ್: ಮಾನ್ಯ ಅಧ್ಯಕ್ಷರೆ, ನಿಧನ ಹೊಂದಿರತಕ್ಕಂಥ ವ್ಯಕ್ತಿ ಬಡವನಾಗಿರುವುದರಿಂದ ಆತನ ಕುಟುಂಬಕ್ಕೆ ಪರಿಹಾರ ಕೊಡಿ ಎಂದು ಕೇಳುತ್ತಿದ್ದೇನಷ್ಟೆ. ಅಲ್ಲಿ ಅಂಗಡಿ ತೆರವುಗೊಳಿಸಿರುವುದಕ್ಕೆ ನಾನು ಪ್ರಶ್ನೆ ಮಾಡುತ್ತಿಲ್ಲ.

ಶ್ರೀ ಎಂ. ಮಹದೇವ್(ನೇಷ್ಮೆ ಸಚಿವರು): ಮಾನ್ಯ ಅಧ್ಯಕ್ಷರೆ, ಈ ಒಂದು ಘಟನೆಯ ಹಿನ್ನೆಲೆಯಲ್ಲಿ ಶಿವರಾಜ್ ಎನ್ನತಕ್ಕಂಥ ವ್ಯಕ್ತಿ ನಿಧನರಾಗಿಲ್ಲ. ಈ ವ್ಯಕ್ತಿಗೆ ಹಿಂದೆ ಮೂರ್ನಾಲ್ಕು ಸಲ ಹೃದಯಾಘಾತವಾಗಿದ್ದು, ಈ ಸಾರಿ ನಿಜವಾಗಿಯೂ ಸಹ ಹೃದಯಾಘಾತದಿಂದಲೇ ಸತ್ತಿರುವುದೆಂದು ಸರ್ಟಿಫಿಕೇಟ್ ತೆಗೆದುಕೊಳ್ಳಲಾಗಿದೆ. ಹಾಗೆಯೇ ಇವರಿಗೆ ಮುಂಚೆಯಿಂದಲೇ ಹೃದಯದ ತೊಂದರೆ ಇತ್ತೆಂಬುದು ಗೊತ್ತಾಗಿದೆ. ಎಲ್ಲರೂ ಅಂಗಡಿಗಳನ್ನು ಖಾಲಿ ಮಾಡಿಕೊಂಡು ಹೋಗುವಾಗ ಈತನೂ ಕೂಡ ಅಂಗಡಿಯನ್ನು ಖಾಲಿ ಮಾಡಿಕೊಂಡು ಹೋಗುವಂಥ ಸಂದರ್ಭದಲ್ಲಿ ಈ ಘಟನೆ ನಡೆದಿದೆ. ಸತ್ತು ಹೋಗಿರುವ ವ್ಯಕ್ತಿಯ ಕುಟುಂಬದ ಮೇಲೆ ಸರ್ಕಾರಕ್ಕೆ ಸಹಾನುಭೂತಿ ಇದ್ದು, ಇಲ್ಲಿ ಹೊಸದಾಗಿ ಮಳಿಗೆ ಕಟ್ಟತಕ್ಕಂಥ ಸಂದರ್ಭದಲ್ಲಿ ಈತನಿಗೆ ಒಂದು ಮಳಿಗೆಯನ್ನು ಕೊಡಲಾಗುತ್ತದೆ. ಈಗಾಗಲೇ 10 ಸಾವಿರ ರೂಪಾಯಿಗಳ ಪರಿಹಾರವನ್ನು ಕೊಟ್ಟಿದ್ದೇವೆ. ಈತ ಕಡು ಬಡವನಾಗಿದ್ದ ಪಕ್ಷದಲ್ಲಿ ಮತ್ತು ಈತನಿಗೆ ಮನೆ ಇಲ್ಲದೆ ಇದ್ದರೆ, ಆಶ್ರಯ ಯೋಜನೆಯಲ್ಲಿ ಮನೆಯನ್ನು ಕೊಡತಕ್ಕಂಥ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಮಾನ್ಯ ಅಧ್ಯಕ್ಷರೆ, ಸತ್ತು ಹೋಗಿರುವ ವ್ಯಕ್ತಿಗೆ ಕೊಡಲಾಗಿದೆ ಎನ್ನುವ ರೀತಿಯಲ್ಲಿ ಮಾನ್ಯ ಸಚಿವರು ಹೇಳಿದ್ದಾರೆ. ಈತನ ಕುಟುಂಬ ವರ್ಗದವರಿಗೆ 10 ಸಾವಿರ ರೂಪಾಯಿಯನ್ನು ಮತ್ತು ಒಂದು ಮನೆ ಕೊಡಲಾಗುವುದೆಂದು ಮಾನ್ಯ ಸಚಿವರು ಹೇಳಿದ್ದರೆ, 10 ಸಾವಿರ ರೂಪಾಯಿ ಸ್ವಲ್ಪ ಜಾಸ್ತಿ ಕೊಡಿ ಎಂದು ಹೇಳುತ್ತಿದ್ದೆವು. ಅಲ್ಲಿ ಸತ್ತಿರತಕ್ಕಂಥ ವ್ಯಕ್ತಿಗೆ ಹಿಂದೆ ಮೂರ್ನಾಲ್ಕು ಸಲ ಹೃದಯಾಘಾತವಾಗಿದ್ದು ಈ ಸಾರಿ ಹೃದಯಾಘಾತವಾಗಿರುವುದರಿಂದಲೇ ಸತ್ತಿರುವುದು ನಿಜವಾಗಿದೆ. ಇಲ್ಲಿ ಅಂಗಡಿಗಳನ್ನು ತೆರವು ಮಾಡುವಂಥ ಸಂದರ್ಭದಲ್ಲಿ ಜನರು ಇದನ್ನು ವಿರೋಧ ವ್ಯಕ್ತಪಡಿಸುವುದು ಸಹಜ. ಆದರೆ ದೇವಸ್ಥಾನದ ಜಾಗವನ್ನು ಸ್ವಚ್ಛಗೊಳಿಸಿ, ಪವಿತ್ರವಾದ ವಾತಾವರಣವನ್ನು ಮೂಡಿಸಬೇಕೆನ್ನುವ ದೃಷ್ಟಿಯಿಂದ ಸರ್ಕಾರ ಈ ಕ್ರಮವನ್ನು ತೆಗೆದುಕೊಂಡಿರುತ್ತದೆ. ಒಂದು ವೇಳೆ ನೀವು ಆತನಿಗೆ ನೋಟೀಸ್ ಕೊಟ್ಟಿದ್ದರೆ, ಆತ ಸ್ವೇ ತೆಗೆದುಕೊಂಡು ಬರುತ್ತಿದ್ದನೋ ಏನೊ ಅದೂ ಸಹ ಗೊತ್ತಿಲ್ಲ. ಈ ಸಂದರ್ಭದಲ್ಲಿ ಸತ್ತಿರತಕ್ಕಂಥ ವ್ಯಕ್ತಿಯ ಕುಟುಂಬದವರಿಗೆ ಮುಖ್ಯಮಂತ್ರಿಯವರ ಪರಿಹಾರ ನಿಧಿಯಿಂದ ಒಂದು ಲಕ್ಷ ರೂಪಾಯಿ ಕೊಡಿಸಬೇಕೆಂದು ಮಾನ್ಯ ಕೃಷ್ಣಮೂರ್ತಿಯವರು ಮತ್ತು ಮಾನ್ಯ ಮಹದೇವಪ್ರಸಾದ್‌ರವರು ಒತ್ತಾಯ ಮಾಡುತ್ತಿದ್ದಾರೆ. ಒಂದು ವೇಳೆ ನಿಮ್ಮ ಹತ್ತಿರವೇ ಯಾವುದಾದರೂ ಪರಿಹಾರ ನಿಧಿಯನ್ನು ಇಟ್ಟುಕೊಂಡಿದ್ದರೆ, ಇದರಿಂದಲೇ ಕೊಡಬಹುದು.

ಶ್ರೀ ಎಚ್.ಎಸ್. ಮಹದೇವ್ ಪ್ರಸಾದ್: ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮಹದೇವ್‌ರವರು ಪ್ರಭಾವಶಾಲಿ ಮಂತ್ರಿಯಾಗಿರುವುದರಿಂದ, ಅಲ್ಲಿ ಸತ್ತಿರತಕ್ಕಂಥ ವ್ಯಕ್ತಿಯ ಕುಟುಂಬಕ್ಕೆ ಕನಿಷ್ಟ ಒಂದು ಲಕ್ಷ ರೂಪಾಯಿಗಳಷ್ಟು ಪರಿಹಾರವನ್ನು ಒದಗಿಸಿಕೊಡುವಂಥ ವ್ಯವಸ್ಥೆ ಮಾಡಬೇಕು.

ಶ್ರೀ ಎಂ. ಮಹದೇವ್(ರೇಷ್ಮೆ ಸಚಿವರು): ಮಾನ್ಯ ಅಧ್ಯಕ್ಷರೆ, ಈ ರೀತಿಯಾದ ಘಟನೆಯಲ್ಲಿ ಒಬ್ಬ ವ್ಯಕ್ತಿ ಸತ್ತರೆ ನಿಯಮಾನುಸಾರ ಎಷ್ಟು ಕೊಡಬೇಕಾಗುತ್ತದೆಯೋ ಅಷ್ಟನ್ನು ಖಂಡಿತಕೊಡತಕ್ಕಂಥ ವ್ಯವಸ್ಥೆ ಮಾಡಲಾಗುತ್ತದೆ.

ಶ್ರೀ ಎಚ್.ಎಸ್. ಮಹದೇವ್ ಪ್ರಸಾದ್: ಬೇರೆ ಸಂದರ್ಭದಲ್ಲಿ ಈ ವ್ಯಕ್ತಿ ಸತ್ತಿದ್ದರೆ ನಾವು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋಗುತ್ತಿರಲಿಲ್ಲ. ಆದರೆ ಅಂಗಡಿಗಳನ್ನು ತೆರವು ಮಾಡಿಸುವಂಥ ಸಂದರ್ಭದಲ್ಲಿ ಹೃದಯಾಘಾತದಿಂದ ನಿಧನ ಹೊಂದಿದ್ದು, ಈತನ ಕುಟುಂಬವರ್ಗದವರಿಗೆ ಪರಿಹಾರ ಕೊಡಬೇಕೆಂದು ನೂರಾರು ಜನರು ಅಲ್ಲಿ ಪ್ರತಿಭಟನೆ ಮಾಡಿರುವ ದೃಷ್ಟಿಯಿಂದ ಈ ವಿಷಯವನ್ನು ಇಲ್ಲಿ ನಾವು ಪ್ರಸ್ತಾಪ ಮಾಡಿದ್ದೇವೆ.

ಶ್ರೀ ಎಂ. ಮಹದೇವ್: ಈಗ ನೂರಾರು ಜನರು ಪ್ರತಿಭಟನೆ ಮಾಡಿದರು ಎಂದು ಹೇಳುತ್ತಾರೆ, ಇನ್ನು ಸ್ವಲ್ಪ ಹೊತ್ತಿಗೆ 10 ರಿಂದ 15 ಜನ ರಲ್ಲಿ ಪ್ರತಿಭಟನೆ ಮಾಡುತ್ತಿದ್ದರೆಂದು ಹೇಳುತ್ತಾರೆ.

ಶ್ರೀ ಎಚ್.ಎಸ್. ಮಹದೇವ್ ಪ್ರಸಾದ್: ನಿಮ್ಮ ಪ್ರಭಾವದ ಮುಂದೆ ಅಲ್ಲಿ ಸಾವಿರಾರು ಜನರನ್ನು ಸೇರಿಸುವುದು ಬಹಳ ಕಷ್ಟ.

ಶ್ರೀ ಎಂ. ಮಹದೇವ್: ಮಾನ್ಯ ಅಧ್ಯಕ್ಷರೆ, ಸತ್ತಿರತಕ್ಕಂಥ ವ್ಯಕ್ತಿಯ ಮೇಲೆ ಮತ್ತು ಬಡವರ ಮೇಲೆ ನನಗೆ ಬಹಳಷ್ಟು ಕಾಳಜಿ ಇದೆ. ಆದ್ದರಿಂದ ನಿಯಮ ಬದ್ಧವಾಗಿ ಏನು ಕೊಡಬೇಕೊ ಅದನ್ನು ಖಂಡಿತವಾಗಿ ಕೊಡುತ್ತೇವೆ.

ಶ್ರೀ ಎ.ಆರ್. ಕೃಷ್ಣಮೂರ್ತಿ: ಮಾನ್ಯ ಅಧ್ಯಕ್ಷರೆ, ಕನಿಷ್ಟಪಕ್ಷ ಒಂದು ಲಕ್ಷ ರೂಪಾಯಿಗಳ ಪರಿಹಾರ ಕೊಡಿಸತಕ್ಕಂಥ ವ್ಯವಸ್ಥೆಯಾಗಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ವಿಷಯ (vii) ಮಂಡ್ಯನಗರದಲ್ಲಿ ಕುಡಿಯುವ ನೀರಿನ ಸರಬರಾಜಿನಲ್ಲಿ ಆಗಿರುವ ತೊಂದರೆ

ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ): ಮಾನ್ಯ ಅಧ್ಯಕ್ಷರೆ, ಮಂಡ್ಯ ನಗರದಲ್ಲಿ ಕುಡಿಯುವ ನೀರಿನಯೋಜನೆಗೆ ವಿದ್ಯುತಿನ ವೋಲ್ಟೇಜಿನ ವ್ಯತ್ಯಾಸದಿಂದ ಕಳೆದ 10 ರಿಂದ 15 ದಿವಸದವರೆಗೆ ನೀರಿನ ಸರಬರಾಜಿನಲ್ಲಿ ಬಹಳ ತೊಂದರೆ ಉಂಟಾಗಿತ್ತು. ಈಗಾಗಲೇ ಇದರ ಬಗ್ಗೆ ವಿದ್ಯುತ್ ರಾಜ್ಯ ಮಂತ್ರಿಯವರು ಸೂಕ್ತ ಕ್ರಮವನ್ನು ತೆಗೆದುಕೊಂಡಿದ್ದಾರೆ. ಆದರೆ ಈಗ ಇರತಕ್ಕಂಥ ವ್ಯವಸ್ಥೆ ಖಾಯಂ ಆಗಿ ಉಳಿಯಬೇಕಾದರೆ, ಹೂಟಗಳ್ಳಿ ವಿದ್ಯುತ್ ಸ್ಟೇಷನ್‌ನಿಂದ ವಿದ್ಯುತ್ ಸರಬರಾಜಾಗುತ್ತಿರುವ ಕಾರ್ಯ ಇದೇ ರೀತಿ ಮುಂದುವರಿಯಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಹಾಗೆಯೇ ಮಾನ್ಯ ನಗರಾಭಿವೃದ್ಧಿ ಸಚಿವರು